ಮೂಲ ದಾವಾ ನಂ. 81/2022

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 21-12-2023 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಸ್. ಜಿ. ಎನ್. ವಕೀಲರಿಂದಃ**

ನನ್ನ ತಂದೆ ನ್ಯಾಯಾಲಯದ ಮುಂದೆ ಬಂದು ಸಾಕ್ಷ್ಯ ನುಡಿಯಲು ಸಶಕ್ತರಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರ ಜಿಪಿಎ ಮಾಡಲು ಅವರನ್ನು ವಾಹನದಲ್ಲಿ ಹೊನ್ನಾವರಕ್ಕೆ ಕರೆದುಕೊಂಡು ಬಂದು ನಂತರ ಜಿ ಪಿ ಎ ಮಾಡಿಸಿರುತ್ತೇನೆ. ಸದ್ರಿ ಜಿ ಪಿ ಎ ಯನ್ನು ನನ್ನ ವಕೀಲರ ಕಛೇರಿಯಲ್ಲಿಯೇ ಬರೆಸಿರುತ್ತೇನೆ. ಅದಕ್ಕೆ ನೋಟರಿ ಯಾರು ಎಂದು ನನಗೆ ನೆನಪಿಲ್ಲ.

ಸರ್ವೆ ನಂ. 399/4 ಅ ದಲ್ಲಿ ಮೊದಲು ಒಂದು ಎಕರೆಯಷ್ಟು ವಿಸ್ತೀರ್ಣ ಇತ್ತು. ಅದರ ಚತುರ್ಗಡಿ ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ಸರ್ವೆ ನಂ.399/ಅ2, ಉತ್ತರಕ್ಕೆ 424, ಪೂರ್ವಕ್ಕೆ 412, ಪಶ್ಚಿಮಕ್ಕೆ ಸರ್ವೆ ಗಡಿ ಫಾರೆಸ್ಟ ಇದೆ. ಸದ್ರಿ ಜಾಗದಲ್ಲಿ ಮೂರು ಗಂಟೆಯಷ್ಟು ಜಾಗ ನನ್ನ ತಂದೆಯವರ ಹೆಸರಿಗೆ ಬಿನ್ ಶೇತ್ಕಿ ಆಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಾತ್ ನಕಾಶೆ ಆಧಾರದ ಮೇಲೆ ಆಗಿದೆ ಎಂದು ನುಡಿಯುತ್ತಾರೆ. ಬಿನ್ ಶೇತ್ಕಿ ಈಗಲೂ ಊರ್ಜಿತದಲ್ಲಿದೆ ಎಂದರೆ ಸರಿ. ಬಿನ್ ಶೇತ್ಕಿ ಜಾಗದಲ್ಲಿ ರಸ್ತೆಯನ್ನು ಕಾಣಿಸಿದ್ದಾರೆ ಎಂದರೆ ಸರಿಯಲ್ಲ. ಬಿನ್ ಶೇತ್ಕಿ ಜಾಗದಲ್ಲಿ ಯಾವದೇ ದಿಕ್ಕಿನಲ್ಲಿ ನಕ್ಷೆ ಇರುವುದಿಲ್ಲ. ಸದ್ರಿ 3 ಗುಂಟೆ ಬಿನ್ ಶೇತ್ಕಿ ಆದ ಜಾಗವನ್ನೇ ನಾನು ಪ್ರತಿವಾದಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿ. ಪ್ರತಿವಾದಿಗೆ ಮಾರಾಟ ಮಾಡಿದ ಜಾಗದ ಚತುರ್ಗಡಿ ಈಗ ನನಗೆ ನೆನಪಿಲ್ಲ. ಸರ್ವೆ ನಂ. 399/4 ಅ2 ರಲ್ಲಿ 3 ಗುಂಟೆ ಕೃಷಿ ಜಮೀನನ್ನು ಪ್ರತಿವಾದಿಯ ಹೆಂಡತಿಗೆ ನನ್ನ ತಂದೆ ಕ್ರಯಕ್ಕೆ ನೀಡಿರುತ್ತಾರೆ ಎಂದರೆ ಸರಿ. ವಾದಿಗೆ ಮಾರಾಟ ಮಾಡಿದ ಜಾಗ ಈಗ 399/4 ಬ ಎಂದು ಆಗಿದೆ ಎಂದರೆ ಸರಿ. ನನ್ನ ತಂದೆ ಕ್ರಯ ದಸ್ತಾವೇಜು ಮಾಡುವಾಗ ನಾನು ಅದಕ್ಕೆ ಸಾಕ್ಷಿಯಾಗಿ ಸಹಿ ಮಾಡಿದ್ದೇನಾ ಇಲ್ಲವಾ ಎಂದು ನನಗೆ ನೆನಪಿಲ್ಲ. ಸದ್ರಿ ಕ್ರಯದಸ್ತಾವೇಜಿನಲ್ಲಿ ಒಂದು ವೇಳೆ ಸದ್ರಿ ಜಾಗವನ್ನು ಬೇರೆಯವರಿಗೆ ಮಾರಾಟ ಮಾಡಬೇಕಾದರೆ ನನ್ನ ತಂದೆಗೆ ಮಾರಾಟ ಮಾಡಬೇಕು ಎಂದು ಬರೆಸಿದ್ದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಬಗ್ಗೆ ಮೌಖಿಕ ಮಾತುಕತೆಯಾಗಿತ್ತು ಎಂದು ನುಡಿಯುತ್ತಾರೆ. ನನ್ನ ತಂದೆ ಸರ್ವೆ ನಂ. 399/4 ಅ ದಲ್ಲಿ ಪ್ಲಾಟ್ ಗಳನ್ನು ಮಾಡಿ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಆ ರೀತಿ ಪ್ಲಾಟ್ ಮಾಡುವಾಗ ಎಲ್ಲಾ ಪ್ಲಾಟುಗಳಿಗೂ 5 ಮೀ ನಷ್ಟು ರಸ್ತೆಯನ್ನು ಬಿಡಲಾಗಿತ್ತು ಎಂದರೆ ಸರಿಯಲ್ಲ. ಈಗ ದಾವಾ ಆಸ್ತಿಯನ್ನು ಬಿಟ್ಟು ಎಲ್ಲಾ ಆಸ್ತಿಗಳು ಮಾರಾಟವಾಗಿವೆ ಎಂದರೆ ಸರಿಯಲ್ಲ.

ದಾವಾ ಆಸ್ತಿ ಪ್ರತಿವಾದಿಯ ಆಸ್ತಿಗೆ ತಾಗಿಕೊಂಡೇ ಇದೆ. ದಾವಾ ಆಸ್ತಿಯ ಕುರಿತು ಈ ದಾವೆಯನ್ನು ಬಿಟ್ಟು ಬೇರೆ ದಾವೆ ಇರುವುದಿಲ್ಲ ಎಂದರೆ ಸರಿ, ಕಂದಾಯ ಪ್ರಕರಣಗಳು ಬಾಕಿ ಇಲ್ಲ ಎಂದರೆ ಸರಿ. ದಾವಾ ಆಸ್ತಿಯ ವಿರುದ್ಧ ಮಾನ್ಯ ಎ ಸಿ ನ್ಯಾಯಾಲಯದಲ್ಲಿ ಒಂದು ಮೇಲ್ಮನವಿ ಸಲ್ಲಿಸಿದ್ದು ಅದು ವಜಾ ಆಗಿದೆ ಎಂದರೆ ಸರಿ. ಪ್ರತಿವಾದಿ ತನಗೆ ಸೇರಿದ ಆಸ್ತಿಯ ಹದ್ದುಬಸ್ತು ಮಾಡಿಸಿ ಪ್ರತ್ಯೇಕ ನಕ್ಷೆ ಮಾಡಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಅದಕ್ಕೆ ನಾವು ತಕರಾರು ಕೊಟ್ಟಿರುತ್ತೇವೆ. ಸದ್ರಿ ನಕ್ಷೆ ಈಗ ಊರ್ಜಿತವಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ನಕ್ಷೆಯನ್ನು ತೋರಿಸಿಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಸಾಕ್ಷಿ ಅದರಲ್ಲಿ ಸರ್ವೆ ನಂ. 399/4 ಅ/1 ಅ/1 ಬ ಎಂದು ಬರೆದಿರುವುದು ನನಗೆ ಸೇರಿದ ಜಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ. 399/4 ಬ ಪ್ರತಿವಾದಿಗೆ ಸೇರಿದ ಆಸ್ತಿ ಎಂದರೆ ಸರಿ. ಸರ್ವೆ ನಂ. 399/4 ಅ2 ಪ್ರತಿವಾದಿಯ ಹೆಂಡತಿಗೆ

ಸೇರಿದ ಆಸ್ತಿ ಎಂದರೆ ಸರಿ. ಸರ್ವೆ ನಂ. 399/4 ಅ/1 ಅ/1 ಬ ದಿಂದ ಸರ್ವೆ ನಂ. 399/4 ಬ ದ ಪಕ್ಕದಲ್ಲಿರುವ ಜಾಗ ರಸ್ತೆಗೆ ಬಿಟ್ಟ ಜಾಗ ಎಂದರೆ ಸರಿಯಲ್ಲ. ಪ್ರದ್ರಿ ನಕ್ಷೆಯಲ್ಲಿ ತೋರಿಸಿರುವ ಸರ್ವೆ ನಂ. 399/4 ಬ ದ ಪಕ್ಕದಲ್ಲಿ ತೋರಿಸಿರುವ ಉದ್ದನೆಯ ಗೆರೆ ರಸ್ತೆ ಎಂದರೆ ಸರಿಯಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದು ಅದನ್ನು ನಿಡಿ 2 ಎಂದು ಗುರುತಿಸಲಾಯಿತು. ಪ್ರದ್ರಿ ನಕ್ಷೆಯಲ್ಲಿ ನನಗೆ ಸೇರಿದ ಬಿನ್ ಶೇತ್ಕಿ ಜಾಗದ ಪೂರ್ವ ದಿಕ್ಕಿಗೆ ನವಿಲುಗೋಣ ರಸ್ತೆ ಎಂದು ಕಾಣಿಸಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಹಾತ್ ನಕ್ಷೆ ಆಧಾರದ ಮೇಲೆ ಆ ರೀತಿ ರಸ್ತೆ ತೋರಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರದ್ರಿ ರಸ್ತೆ ಪ್ರತಿವಾದಿಯ ಜಾಗಕ್ಕೆ ಸಂಪರ್ಕ ಹೊಂದುವ ರಸ್ತೆ ಎಂದರೆ ಸರಿಯಲ್ಲ. ಬಿನ್ ಶೇತ್ಕಿಯಲ್ಲಿ ತೋರಿಸಿದ ರಸ್ತೆ ಪಂಚಾಯತಿಯವರ ರಸ್ತೆ ಮತ್ತು ಅದು ನನ್ನ ಜಾಗದಲ್ಲಿ ಬರುವುದಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಹೊನ್ನಾವರ.